# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1656 (2030) |
| ಮಾನ್ಯ ಸದಸ್ಯರ ಹೆಸರು | ಶ್ರೀ ಎನ್.ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು). |
| ಉತ್ತರಿಸುವ ದಿನಾಂಕ | 25-03-2026 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರದ ಕಾಚರಕನ ಹಳ್ಳಿಯ ಉಪನೋಂದಣಾಧಿಕಾರಿ, ಹುಮನಾಬಾದ್ ಉಪನೋಂದಣಾಧಿಕಾರಿ, ಜೂನ್ 2019 ರಿಂದ ಜನವರಿ 2022ರ ನಡುವೆ ಮಹದೇವಪುರ ಮತ್ತು ನೆಲಮಂಗಲದ ಉಪನೋಂದಣಾಧಿಕಾರಿಯವರು<br>ಸರ್ಕಾರಕ್ಕೆ ನೋಂದಣಿ ಶುಲ್ಕ ನಷ್ಟ ಉಂಟುಮಾಡಿದ್ದು, ಈ ನಷ್ಟ ಮಾಡಿರುವ ಉಪನೋಂದಣಾಧಿಕಾರಿಯವರ ಮೇಲೆ ಸರ್ಕಾರ ಕೈಗೊಂಡ ಕ್ರಮಗಳೇನು;<br>ಸದರಿಯವರನ್ನು<br>ಅಮಾನತ್ತುಗೊಳಿಸಲಾಗಿದೆಯೇ;<br>ಇಲ್ಲವಾದಲ್ಲಿ ಯಾವಾಗ ಅಮಾನತ್ತುಗೊಳಿಸಲಾಗುವುದು; (ವಿವರ ನೀಡುವುದು) | ಸರ್ಕಾರಕ್ಕೆ ರಾಜಸ್ವ ನಷ್ಟವುಂಟು ಮಾಡಿರುವ ಪ್ರಕರಣಗಳಿಗೆ ಸಂಬಂಧಿಸಿದಂತೆ ಸಂಬಂಧಪಟ್ಟ ಉಪ ನೋಂದಣಾಧಿಕಾರಿಗಳ ವಿರುದ್ಧ ಈ ಕೆಳಕಂಡಂತೆ ಕ್ರಮವಹಿಸಲಾಗಿರುತ್ತದೆ.<br><br>ಕಾಚರಕನಹಳ್ಳಿಯ ಉಪ ನೋಂದಣಾಧಿಕಾರಿ ರವರನ್ನು ದಿನಾಂಕ: 02-01-2026 ರಂದು ಬೇರೊಂದು ಪ್ರಕರಣದಲ್ಲಿ ಅಮಾನತ್ತಿನಲ್ಲಿರಿಸಿ ಆದೇಶಿಸಿದ್ದು, ಪ್ರಸ್ತುತ ಸದರಿಯವರು ಅಮಾನತ್ತಿನಲ್ಲಿರುತ್ತಾರೆ.<br><br>ಹುಮನಾಬಾದ್ ಪ್ರಭಾರ ಉಪ ನೋಂದಣಾಧಿಕಾರಿ ರವರ ವಿರುದ್ಧ ಇಲಾಖಾ ವಿಚಾರಣೆ ಪ್ರಾರಂಭಿಸಲಾಗಿದೆ.<br><br>ಮಹದೇವಪುರ ಉಪನೋಂದಣಾಧಿಕಾರಿಗಳಿಗೆ ಕಾರಣ ಕೇಳುವ ನೋಟಿಸ್ ಜಾರಿಗೊಳಿಸಿ, ಶಿವಾಜಿನಗರ ಜಿಲ್ಲಾ ನೋಂದಣಾಧಿಕಾರಿಗಳು ಸದರಿಯವರ ವಿರುದ್ಧ ಇಲಾಖಾ ವಿಚಾರಣೆ ಹೂಡುವಂತೆ ದಿನಾಂಕ:10-03-2026 ರಂದು ವರದಿ ಸಲ್ಲಿಸಿದ್ದು, ಸಂಬಂಧಪಟ್ಟ ಮಹದೇವಪುರ ಹೆಚ್ಚುವರಿ ಉಪ ನೋಂದಣಾಧಿಕಾರಿಗಳಿಗೆ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ (ವಿ ನಿ & ನೋಂದಣಿ ಮತ್ತು ಮುದ್ರಾಂಕ) ರವರು ಶಿಸ್ತು ಪ್ರಾಧಿಕಾರವಾಗಿರುವುದರಿಂದ, ಸದರಿ ಹೆಚ್ಚುವರಿ ಉಪ ನೋಂದಣಾಧಿಕಾರಿಯವರ (ಕೇಂದ್ರ ಸ್ಥಾನ ಸಹಾಯಕರು) ವಿರುದ್ಧ ಇಲಾಖಾ ವಿಚಾರಣೆ ಹೂಡುವಂತೆ ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು ರವರಿಂದ ಪ್ರಸ್ತಾವನೆ ಸ್ವೀಕೃತವಾಗಿರುತ್ತದೆ<br><br>ನೆಲಮಂಗಲ ಉಪನೋಂದಣಾಧಿಕಾರಿಗಳಿಗೆ ಸಂಬಂಧಿಸಿದ ಪ್ರಕರಣದಲ್ಲಿ ಜಿಲ್ಲಾ ನೋಂದಣಾಧಿಕಾರಿಗಳು ಕರ್ನಾಟಕ ಮುದ್ರಾಂಕ ಕಾಯ್ದೆ 1957ರ ಕಲಂ 46-A |

| | | |
|---|---|---|
| | | ಮತ್ತು ನೋಂದಣಿ ಕಾಯ್ದೆ 1908ರ ಕಲಂ 80-A ರಡಿ ಪ್ರಕರಣವನ್ನು ದಾಖಲಿಸಿಕೊಂಡು, ಆದೇಶ ಸಂಖ್ಯೆ: DR.BLR RURAL/46A & 80A/NEL/06/19-20 ರನ್ವಯ ದಿನಾಂಕ:07-01-2022 ರಂದು ರೂ 1,200/- ಗಳಷ್ಟು ಕೊರತೆ ಶುಲ್ಕವನ್ನು ಪಾವತಿಸಲು ಆದೇಶಿಸಿರುತ್ತಾರೆ.<br><br>ಸದರಿ ಮೊತ್ತ ರೂ 1,200/- ಗಳನ್ನು ಪಕ್ಷಕಾರರಿಂದ ಚಲನ್ ಸಂಖ್ಯೆ: CR0122003000633823 ರನ್ವಯ ದಿನಾಂಕ 27-01-2022 ರಂದು ಮತ್ತು ರಶೀದಿ ಸಂಖ್ಯೆ 220, ದಿನಾಂಕ:31-01-2022 ರನ್ವಯ ಜಿಲ್ಲಾ ನೋಂದಣಾಧಿಕಾರಿಗಳು ಗ್ರಾಮಾಂತರ ರವರು ವಸೂಲಾಯಿಸಲಾಗಿರುವುದರಿಂದ ಉಪ ನೋಂದಣಾಧಿಕಾರಿಗಳ ವಿರುದ್ಧ ಕ್ರಮ ಕೈಗೊಂಡಿರುವುದಿಲ್ಲ. |
| ಆ) | ನಷ್ಟವಾಗಿರುವ ನೋಂದಣಿ ಶುಲ್ಕವನ್ನು ಸಂಬಂಧಿತ ಉಪನೋಂದಣಿ ಅಧಿಕಾರಿಯಿಂದಲೇ ವಸೂಲಿ ಮಾಡಿ ಸರ್ಕಾರಕ್ಕೆ ಜಮಾ ಮಾಡಲು ಕೈಗೊಂಡ ಕ್ರಮಗಳೇನು; ಯಾವಾಗ ವಸೂಲಿ ಮಾಡಲಾಗುವುದು; | 1. ಕಾಚರಕನಹಳ್ಳಿ ಉಪ ನೋಂದಣಾಧಿಕಾರಿಗಳ ಕಛೇರಿಗೆ ಸಂಬಂಧಿಸಿದ ದಸ್ತಾವೇಜು ಸಂಖ್ಯೆ: 3293/2020-21ಗೆ ಸಂಬಂಧಿಸಿದ ಪ್ರಕರಣದಲ್ಲಿ ಜಿಲ್ಲಾ ನೋಂದಣಾಧಿಕಾರಿಗಳು ಗಾಂಧಿನಗರ ರವರು ಆದೇಶ ಸಂಖ್ಯೆ:46A/KCH/48/2023-24, ದಿನಾಂಕ: 28-10-2025 ರಂದು ರೂ.4,17,12,693/- ಗಳಷ್ಟು ಕೊರತೆ ಶುಲ್ಕಗಳನ್ನು ಭರಿಸುವಂತೆ ಸಂಬಂಧಪಟ್ಟ ಪಕ್ಷಕಾರರಿಗೆ ಸೂಚಿಸಿ ಆದೇಶ ಹೊರಡಿಸಿರುತ್ತಾರೆ.<br>2. ಹುಮನಾಬಾದ್ ಉಪನೋಂದಣಾಧಿಕಾರಿಗಳ ಕಛೇರಿಗೆ ಸಂಬಂಧಿಸಿದ ಪ್ರಕರಣದಲ್ಲಿ ಜಿಲ್ಲಾ ನೋಂದಣಾಧಿಕಾರಿಗಳು ಬೀದರ್ ರವರು ಕರ್ನಾಟಕ ಮುದ್ರಾಂಕ ಕಾಯ್ದೆ 1957ರ ಕಲಂ 46-ಎ ರನ್ವಯ ಮತ್ತು ನೋಂದಣಿ ಕಾಯ್ದೆ 1908 ರ ಕಲಂ 80-ಎ ರನ್ವಯ ಪ್ರಕರಣವನ್ನು ದಾಖಲಿಸಿಕೊಂಡು ವಿಚಾರಣೆ ನಡೆಸಿ, ಸದರಿ ಸ್ವತ್ತಿನ ಮೌಲ್ಯವನ್ನು ನಿರ್ಧರಿಸಿ |

| | | |
|---|---|---|
| | | ರೂ.8,50,193/-ಗಳ ಕೊರತೆ ಶುಲ್ಕ ಉಂಟಾಗಿರುವುದಾಗಿ ಆದೇಶ ಸಂಖ್ಯೆ: STP-46-A/HUM/ ದಸ್ತು.ನಂ.7039/ 2019-20/424, ದಿನಾಂಕ: 03-09-2024 ರಂದು ಪಕ್ಷಕಾರರಿಗೆ ಪಾವತಿಸುವಂತೆ ಸೂಚಿಸಿ ಆದೇಶ ಹೊರಡಿಸಿರುತ್ತಾರೆ.<br>3. ಮಹದೇವಪುರ ಉಪ ನೋಂದಣಾಧಿಕಾರಿಗಳ ಕಛೇರಿಗೆ ಸಂಬಂಧಿಸಿದ ಪ್ರಕರಣದಲ್ಲಿ ಶಿವಾಜಿನಗರ ಜಿಲ್ಲಾ ನೋಂದಣಾಧಿಕಾರಿಗಳು ಸದರಿ ದಸ್ತಾವೇಜಿನ ಸಂಬಂಧ ಆಕ್ಷೇಪಿಸಿರುವ ಆಕ್ಷೇಪಣೆಯನ್ನು ಪರಿಶೀಲಿಸಲು ಕರ್ನಾಟಕ ಮುದ್ರಾಂಕ ಕಾಯ್ದೆ 1957ರ ಕಲಂ 46-A ಮತ್ತು ನೋಂದಣಿ ಕಾಯ್ದೆ 1908ರ ಕಲಂ 80-A ರಡಿ ಪ್ರಕರಣವನ್ನು ದಾಖಲಿಸಿಕೊಂಡು, ಆದೇಶ ಸಂಖ್ಯೆ:SJN/MDP/46A/15/2022-23/1871 ರನ್ವಯ ದಿನಾಂಕ:11-09-2023 ರಂದು ರೂ.23,81,675/- ಗಳಷ್ಟು ಕೊರತೆ ಶುಲ್ಕವನ್ನು ಪಕ್ಷಕಾರರು ಪಾವತಿಸಲು ಆದೇಶಿಸಿರುತ್ತಾರೆ.<br>4. ನೆಲಮಂಗಲ ಉಪನೋಂದಣಾಧಿಕಾರಿ ಇವರಿಗೆ ಸಂಬಂಧಿಸಿದ ಪ್ರಕರಣದಲ್ಲಿ ಜಿಲ್ಲಾ ನೋಂದಣಾಧಿಕಾರಿಗಳು ಕರ್ನಾಟಕ ಮುದ್ರಾಂಕ ಕಾಯ್ದೆ 1957ರ ಕಲಂ 46-A ಮತ್ತು ನೋಂದಣಿ ಕಾಯ್ದೆ 1908ರ ಕಲಂ 80-A ರಡಿ ಪ್ರಕರಣವನ್ನು ದಾಖಲಿಸಿಕೊಂಡು, ಆದೇಶ ಸಂಖ್ಯೆ:DR.BLR.RURAL/46A & 80A/NEL/06/19-20 ರನ್ವಯ ದಿನಾಂಕ: 07-01-2022 ರಂದು ರೂ.1,200/- ಗಳಷ್ಟು ಕೊರತೆ ಶುಲ್ಕವನ್ನು ಪಕ್ಷಕಾರರು ಪಾವತಿಸಲು ಆದೇಶಿಸಿರುತ್ತಾರೆ.<br><br>ಸದರಿ ಮೊತ್ತ ರೂ.1,200/- ಗಳನ್ನು ಪಕ್ಷಕಾರರಿಂದ ಚಲನ್ ಸಂಖ್ಯೆ |

| | | |
|---|---|---|
| | | CR0122003000633823 ರನ್ವಯ ದಿನಾಂಕ 27-01-2022 ರಂದು ಮತ್ತು ರಶೀದಿ ಸಂಖ್ಯೆ 220 ದಿನಾಂಕ:31-01-2022 ರನ್ವಯ ಜಿಲ್ಲಾ ನೋಂದಣಾಧಿಕಾರಿಗಳು ಗ್ರಾಮಾಂತರ ರವರು ವಸೂಲಾಯಿಸಿರುತ್ತಾರೆ |
| ಇ) | ದೇವನಹಳ್ಳಿಯ ಆಕಾಶ್ ಶೈಕ್ಷಣಿಕ ಮತ್ತು ಅಭಿವೃದ್ಧಿ ಟ್ರಸ್ಟ್ ಗೆ ಆಸ್ತಿಯ ವರ್ಗಾವಣೆ ಸಮಯದಲ್ಲಿ ಉಪನೋಂದಣಾಧಿಕಾರಿಯವರು ಉದ್ದೇಶ ಪೂರ್ವಕವಾಗಿ ಮುದ್ರಾಂಕ ಶುಲ್ಕವನ್ನು ಕಡಿಮೆ ದರದಲ್ಲಿ ವಿಧಿಸಿರುವುದರಿಂದ ರೂ.10.51 ಕೋಟಿ ರೂಗಳ ನೋಂದಣಿ ಶುಲ್ಕ ಸರ್ಕಾರಕ್ಕೆ ನಷ್ಟವಾಗಿದ್ದು, ಈ ಕುರಿತು ಸರ್ಕಾರದ ನಿಲುವೇನು. | ದೇವನಹಳ್ಳಿ ಉಪನೋಂದಣಿ ಕಛೇರಿಯಲ್ಲಿ ದಿನಾಂಕ: 20.03.2020 ರಂದು ದಸ್ತಾವೇಜು ಸಂಖ್ಯೆ 12064/2019-20, 12065/2019-20 & 16067/2019-20 ಗಳು AKASH EDUCATION AND DEVELOPMENT TRUST ನ ಪರವಾಗಿ Trustee and Chairperson ಶ್ರೀಮತಿ ಎಂ ಪುಷ್ಪ ಇವರಿಗೆ ಕ್ರಮವಾಗಿ ಶ್ರೀ ಎಂ.ಮಂಜುನಾಥ್, ಶ್ರೀಮತಿ ಎಂ ಪುಷ್ಪ ಮತ್ತು ಶ್ರೀ ಕೆ ಮುನಿರಾಜು ರವರು ಬರೆದುಕೊಟ್ಟಿರುವ Deed of Settlement for charitable Trust ಶಿರೋನಾಮೆಯ 03 ದಸ್ತಾವೇಜುಗಳು ನೋಂದಣಿಯಾಗಿರುತ್ತವೆ.<br><br>ಸದರಿ ದಿನಾಂಕ:20-03-2020 ರಂದು ನೋಂದಣಿಯಾದ ದಸ್ತಾವೇಜುಗಳಿಗೆ ದಿನಾಂಕ 22-06-2020 ರಂದು ಕ್ರಮವಾಗಿ ದಸ್ತಾವೇಜು ಸಂಖ್ಯೆ 1223/2020-21, 1222/2020-21 ಮತ್ತು 1221/2020-21 ಗಳನ್ವಯ Rectification Deed ಶಿರೋನಾಮೆಯ 03 ದಸ್ತಾವೇಜುಗಳು ನೋಂದಣಿಯಾಗಿರುತ್ತವೆ.<br><br>ಮಹಾಲೇಖಪಾಲರ ಕಛೇರಿಯ ಆಡಿಟ್ ಅಧಿಕಾರಿಗಳು ಪತ್ರ ಸಂಖ್ಯೆ.Pr.AG(AU-I)/AMG-III/ VS-II/SD&RF/B/2022-23/14, ದಿನಾಂಕ. 27-04-2022ರ ಪತ್ರದಲ್ಲಿ ದೇವನಹಳ್ಳಿ ಉಪನೋಂದಣಿ ಕಛೇರಿಯಲ್ಲಿ ನೋಂದಣಿಯಾದ ದಸ್ತಾವೇಜುಗಳ ತಪಾಸಣೆ ಸಂದರ್ಭದಲ್ಲಿ ಮೇಲ್ಕಂಡ ದಸ್ತಾವೇಜುಗಳ ನೋಂದಣಿಯಿಂದ ಕ್ರಮವಾಗಿ ರೂ.3,40,67,980/-, ರೂ.5,45,09,487/- ಮತ್ತು ರೂ.1,65,72,995/- ಈ ರೀತಿ ಒಟ್ಟು ರೂ.10,51,50,462/- ಕೊರತೆ ಶುಲ್ಕ ಉಂಟಾಗಿರುವುದಾಗಿ ಸಂಬಂಧಪಟ್ಟ ಜಿಲ್ಲಾ ನೋಂದಣಾಧಿಕಾರಿ ಮತ್ತು ಉಪ ನೋಂದಣಾಧಿಕಾರಿರವರಿಗೆ ಆಡಿಟ್ ವರದಿಯನ್ನು ಸಲ್ಲಿಸಿರುತ್ತಾರೆ.<br><br>ಸದರಿ ಆಡಿಟ್ ವರದಿಯಂತೆ ಹಿಂದಿನ ಜಿಲ್ಲಾ ನೋಂದಣಾಧಿಕಾರಿಗಳು ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರು ಅರೆ ನ್ಯಾಯಿಕ ಪ್ರಾಧಿಕಾರವಾಗಿರುವುದರಿಂದ (Quasi Judicial Authority) ಸದರಿ |

| | | |
|---|---|---|
| | | ದಸ್ತಾವೇಜುಗಳನ್ನು ಕರ್ನಾಟಕ ಮುದ್ರಾಂಕ ಕಾಯ್ದೆ 1957ರ ಕಲಂ 46-A ಮತ್ತು ನೋಂದಣಿ ಕಾಯ್ದೆ 1908ರ ಕಲಂ 80-A ರ ಅಡಿಯಲ್ಲಿ ಪ್ರಕರಣವನ್ನು ದಾಖಲಿಸಿಕೊಂಡು ವಿಚಾರಣೆ ನಡೆಸಿ ದಿನಾಂಕ 24-11-2023 ರಂದು ಸದರಿ ದಸ್ತಾವೇಜುಗಳಿಗೆ ಕ್ರಮವಾಗಿ ರೂ 18,14,370/-, ರೂ 29,03,120/- ಮತ್ತು ರೂ.8,82,570/- ಒಟ್ಟು ರೂ.56,00,060/- ಕೊರತೆ ಶುಲ್ಕ ಉಂಟಾಗಿರುವುದಾಗಿ ದಸ್ತಾವೇಜುವಾರು 03 ಪ್ರತ್ಯೇಕವಾದ ಅರೆ ನ್ಯಾಯಿಕ ಆದೇಶಗಳನ್ನು ಹೊರಡಿಸಿರುತ್ತಾರೆ.<br><br>ಸದರಿ ಆದೇಶಗಳಂತೆ ಪಕ್ಷಕಾರರು ರೂ 18,14,370/- ಗಳನ್ನು ಚಲನ್ ಸಂಖ್ಯೆ CR0124003000327086 ರನ್ವಯ ದಿನಾಂಕ 29-01-2024 ರಂದು ರಶೀದಿ ಸಂಖ್ಯೆ 758 ದಿನಾಂಕ 01-02-2024 ರನ್ವಯ ಪಾವತಿಸಿರುತ್ತಾರೆ<br><br>ಸದರಿ ಆದೇಶಗಳಂತೆ ಪಕ್ಷಕಾರರು ರೂ 29,03,120/- ಗಳನ್ನು ಚಲನ್ ಸಂಖ್ಯೆ CR0124003000326448, ರನ್ವಯ ದಿನಾಂಕ 29-01-2024 ರಂದು ರಶೀದಿ ಸಂಖ್ಯೆ 760 ದಿನಾಂಕ 01-02-2024 ರನ್ವಯ ಪಾವತಿಸಿರುತ್ತಾರೆ.<br><br>ಸದರಿ ಆದೇಶಗಳಂತೆ ಪಕ್ಷಕಾರರು ರೂ.8,82,570/- ಗಳನ್ನು ಚಲನ್ ಸಂಖ್ಯೆ CR1223003000327603, ರನ್ವಯ ದಿನಾಂಕ 27.12.2023 ರಂದು ರಶೀದಿ ಸಂಖ್ಯೆ 759 ದಿನಾಂಕ 01-02-2024 ರನ್ವಯ ಪಾವತಿಸಿರುತ್ತಾರೆ |
| ಈ) | ಸಮರ್ಪಕ ತರಬೇತಿ ಪಡೆದಿರದ ಅನರ್ಹ ಉಪನೋಂದಣಾಧಿಕಾರಿಯವರನ್ನು ಇತರ ಕರ್ತವ್ಯಗಳಿಗೆ ನಿಯೋಜಿಸದೇ ಸರ್ಕಾರಕ್ಕೆ ನಷ್ಟವಾದರೂ ಅದೇ ಹುದ್ದೆಯಲ್ಲಿ ಮುಂದುವರೆಯಲು ಅವಕಾಶ ಕಲ್ಪಿಸುವ ಅನಿವಾರ್ಯತೆ ಸರ್ಕಾರಕ್ಕಿದೆಯೇ? (ವಿವರ ನೀಡುವುದು) | ಮೇಲೆ ವಿವರಿಸಿದ ಪ್ರಕರಣಗಳಲ್ಲಿನ ಉಪನೋಂದಣಾಧಿಕಾರಿಗಳು ಪ್ರಸ್ತುತ ಸದರಿ ಕಛೇರಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವುದಿಲ್ಲ. |

ಕಂಇ/120/ಎಂಎಸ್‌ಎಸ್‌ಎ/2026

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು